MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 15 -11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಇಳಿಕೆಯಲ್ಲಿದ್ದ ಮಲೇಶಿಯನ್ ಪಾಮೆಣ್ಣೆ ದರ ಮತ್ತೆ ಹೆಚ್ಚಳ

ಹಿಂದಿನ ಕೆಲವು ದಿನ ಇಳಿಕೆಯತ್ತ ಸಾಗಿದ್ದ ಪಾಮೆಣ್ಣೆ ಫ್ಯೂಚರ್ ದರ ಪ್ರತಿಕೂಲ ಹವಾಮಾನದಿಂದ ಉತ್ಪಾದನೆಗೆ ತೊಡಕು ಇವುಗಳಿಂದ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಹೆಚ್ಚಳವಾಗಿದೆ. ಆದರೆ ರಿಂಗಿಟ್ಸ್ ಪ್ರಾಬಲ್ಯ ಗಳಿಕೆಗೆ ಕಡಿವಾಣ ತೊಡಿಸಿದೆ. ಸೋಯಾಬೀನ್ ಎಣ್ಣೆ ಜಾಗತಿಕ ದರ 1 ಶೇಕಡಾ ಹೆಚ್ಚಳವಾಗಿದೆ.

## ಭಾರತ ಪಾಮೆಣ್ಣೆ ಆಮದು 2021–22 ರಲ್ಲಿ 4.8 ಶೇಕಡಾ ಇಳಿಕೆ

ಭಾರತ ಪಾಮೆಣ್ಣೆ ಆಮದು 2021 ನವೆಂಬರ್ ನಿಂದ 2022 ಅಕ್ಟೋಬರ್ ಅಂತ್ಯದ ತನಕ ಹಿಂದಿನ ಇದೇ ಅವಧಿಉ 8.3 ಮಿಲಿಯನ್ ಟನ್ ಗಳಿಗೆ ಇಳಿಕೆಯಾಗಿದೆಯೆಂದ ಸಾಲ್ವೆಂಟ್ ಎಕ್ಸ್‌ಟ್ರಾಕ್ಷನ್ ಅಸೋಸಿಯೇಶಿನ್ ವರದಿ ಮಾಡಿದೆಯೆನ್ನಲಾಗಿದೆ. ಇದೇ ಅವಧಿಯಲ್ಲಿ ಸೋಯಾಬೀನ್ ಎಣ್ಣೆ ಆಮದು 45.3 ಶೇಕಡಾ ದಾಖಲೆ ಹೆಚ್ಚಳವಾಗಿದೆಯೆನ್ನಲಾಗಿದೆ.

## ಜೋಳ ದರ ಹೆಚ್ಚಳ

ಕರ್ನಾಟಕದ ದಾವಣಗೆರೆ ಮಾರುಕಟ್ಟೆಯಲ್ಲಿ ಉತ್ತಮ ಗುಣ ಮಟ್ಟದ ಜೋಳಕ್ಕೆ ಅಧಿಕ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಬಿಹಾರದ ಪುರ್ನಿಯಾ ಮಾರುಕಟ್ಟೆಯಲ್ಲಿ ಆವಕ ಇಳಿಕೆಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## ಉತ್ತರ ಭಾರತದಲ್ಲಿ ಸಕ್ಕರೆ ದರ ಇಳಿಕೆ

ಹೊಸ ಉತ್ಪಾದನೆಯ ಆವಕ ಮಾರುಕಟ್ಟೆಗೆ ಬದಲಾರಂಭವಾಗುತ್ತಿರುವುದರಿಂದ ಉತ್ತರ ಭಾರತದ ಮಾರುಕಟ್ಟೆಗಳಲ್ಲಿ ಸಕ್ಕರೆ ಎಕ್ಸ್‌ಮಿಲ್ ದರಗಳು ಕ್ವಿಗೆ ರೂ. 25–30 ಇಳಿಕೆಯಾಗಿದೆಯೆನ್ನಲಾಗಿದೆ. ಉತ್ತರಪ್ರದೇಶದ ಪಶ್ಚಿಮಭಾಗದಲ್ಲಿ ದರ ಕ್ವಿಂ ಗೆ ರೂ.5–10 ಇಳಿಕೆಯಾಗಿದೆಯೆನ್ನಲಾಗಿದೆ. ಮಹಾರಾಷ್ಟ್ರದಲ್ಲಿ ಬೇಡಿಕೆ ಹಾಗೂ ಆವಕಗಳು ಸಮಾನವಿರುವುದರಿಂದ ದರ ಸ್ಥಿರವಿದೆಯೆನ್ನಲಾಗಿದೆ.

## ಸರಕಾರಿ ಭತ್ತ ಖರೀದಿ 1–31 ಶೇಕಡಾ ಹೆಚ್ಚಳ

ಸರಕಾರದ ಭತ್ತ ಖರೀದಿ ಈ ವರ್ಷ ಹಿಂದಿನ ವರ್ಷದ 228 ಮಿಲಿಯನ್ ಟನ್‌ಗಳಿಂದ ( ಈ ಅವಧಿಯಲ್ಲಿ) ನವೆಂಬರ್ 11 ರ ತನಕ 231 ಟನ್ ಗಳಿಗೆ ಹೆಚ್ಚಳವಾಗಿದೆಯೆನ್ನಲಾಗಿದೆ.